

# ಮಲ್ಲಿಕಾ ಮನೆ

ಮಲ್ಲಿಕಾ ಶೆರಾವತ್ ಎಂಬ ಉದ್ದಕಾಲಿನ ಬೆಡಗಿ ಏನು ಮಾಡಿದರೂ ಸುದ್ದಿಯೇ. ಮುಂಬೈಗಿಂತ ಹೆಚ್ಚಾಗಿ ಹಾಲಿವುಡ್‌ನಲ್ಲೇ ಓಡಾಡುತ್ತಿರುವ ಮಲ್ಲಿಕಾ ಅಮೆರಿಕದ ಅಧ್ಯಕ್ಷರ ಜತೆಗೆ ಊಟ ಮಾಡಿದ್ದು; ಹಾಲಿವುಡ್ ಚಿತ್ರಗಳಲ್ಲಿ ನಟಿಸಿದ್ದು– ಎಲ್ಲವೂ ಹಳೇ ಸುದ್ದಿ. ಹೊಸಾ ಸುದ್ದಿ ಏನಪ್ಪಾಂತಂದ್ರೆ, ಲಾಸ್ ಏಂಜಲೀಸ್‌ನಲ್ಲಿ ಮಲ್ಲಿಕಾ ಇತ್ತೀಚೆಗೆ ಎರಡು ಭರ್ಜರಿ ಮನೆಗಳನ್ನು ಖರೀದಿಸಿದ್ದಾಳಂತೆ. ಜತೆಗೆ ಅತ್ಯಾಧುನಿಕ ದುಬಾರಿ ಕಾರೊಂದನ್ನು ಖರೀದಿಸಿದ್ದಾಳಂತೆ!

'ಹಿಸ್' ಎಂದು ಹಾವಿನ ಜತೆಗೆ ಸರಸವಾಡಿದ ಸಿನಿಮಾ ಬಾಕ್ಸಾಫೀಸ್‌ನಲ್ಲಿ ತೋಪೆದ್ದರೂ ಮಲ್ಲಿಕಾಗೆ ಅವಕಾಶಗಳ ಕೊರತೆಯಂತೂ ಇಲ್ಲ. ನಟನೆ ಗೊತ್ತಿಲ್ಲದಿದ್ದರೂ ದೈಹಿಕ ಸೌಂದರ್ಯವೇ ಅವಕಾಶಗಳನ್ನು ಪಡೆಯಲು ಸಾಕು ಎಂದುಕೊಂಡಿರುವ ಈ ಬೆಡಗಿ, ಬಡ ಹಿಂದಿ ನಿರ್ಮಾಪಕರ ಕೈಗಂತೂ ಎಟುಕುವುದೇ ಇಲ್ಲವಂತೆ!



# ರಜನಿ ಸಾರ್‌ಕ್ಕ್ ಎನ್ನಾಚ್ಚಿ?

ಒಂದು ವಾರವಿಡೀ ಇದೇ ಪ್ರಶ್ನೆ! 'ರಜನಿ ಸಾರ್‌ಕ್ಕ್ ಎನ್ನಾಚ್ಚಿ..?' ಎಂದು ತಮಿಳುನಾಡಿನ ಉದ್ದಕ್ಕೂ ಆತಂಕದ ಧ್ವನಿ. ಕೇವಲ ತಮಿಳುನಾಡು ಮಾತ್ರವಲ್ಲ ದೇಶದ ಉಳಿದ ರಾಜ್ಯಗಳಲ್ಲೂ ಅಭಿಮಾನಿಗಳ ದುಗುಡ. ಚೆನ್ನೈ, ಬೆಂಗಳೂರು ಬಿಡಿ, ದೂರದ ಮುಂಬೈ, ದೆಹಲಿಯಲ್ಲೂ ಅಭಿಮಾನಿಗಳೂ ರಜನಿಕಾಂತ್‌ರ ಆರೋಗ್ಯಕ್ಕೆ ಪ್ರಾರ್ಥಿಸಿ ದೇವಾಲಯಗಳ ಮೊರೆ ಹೊಕ್ಕ ಸುದ್ದಿ. ನಡುವೆ 'ರಜನಿ ಸಾರ್.. ಹೋಗಿಯೇ ಬಿಟ್ಟರಂತಲ್ಲ..?' ಎಂದು ಒಂದು ಇಡೀ ದಿನ ಗಾಳಿಸುದ್ದಿಯ ಭರಾಟೆ. 'ಹಾಗೆ ಸುದ್ದಿ ಹಬ್ಬಿದ್ದು ಒಳ್ಳೆಯದೇ ಆಯ್ತು, ಅದರಿಂದ ಅವರ ಆಯುಷ್ಯ ಜಾಸ್ತಿಯಾಗುತ್ತೆ' ಎನ್ನುವುದು ನೂರೆಂಟು ಅಭಿಮಾನಿಗಳ ಉದ್ಗಾರ. 'ನಾಗವಲ್ಲಿಯ ಸಮಸ್ಯೆ ಇರಬೇಕು ಕಣ್ರೀ. ಹಿಂದೆ ಆ ಸಿನಿಮಾ ಮಾಡಿ ವಿಷ್ಣುವರ್ಧನ್‌ರಿಗೂ ಹಾಗಾಯ್ತು. ಈಗ ರಜನಿ ಸರದಿ' ಎಂದು ಕೆಲವು ಮಾಧ್ಯಮಗಳಲ್ಲಿ ತಲೆಬುಡವಿಲ್ಲದ ಸುದ್ದಿ ಪ್ರಸಾರ!

'ಅಂತಹ ಗಂಭೀರವಾದದ್ದು ಏನೂ ಆಗಿಲ್ಲ. ಶ್ವಾಸಕೋಶದ ಸೋಂಕು ಆಗಿದೆ. ಜತೆಗೆ ಗ್ಯಾಸ್ಟ್ರೊ ಸಮಸ್ಯೆ' ಎಂದು ರಜನಿ ಪತ್ನಿ ಲತಾ ಸಮಾಧಾನ ಹೇಳಿದರೂ, ಅಭಿಮಾನಿಗಳು ನಂಬಲು ಸಿದ್ಧರಿರಲಿಲ್ಲ. 'ಅಷ್ಟಕ್ಕೇ ಐಸಿಯು ನಲ್ಲೇಕೆ ಅಡ್ಮಿಟ್ ಮಾಡಿದ್ರಿ?' ಅನ್ನೋ ಪ್ರಶ್ನೆ. 'ನಿರ್ಲಕ್ಷ್ಯ ಮಾಡೋ ಹಂಗಿಲ್ಲ. ಜಾಗ್ರತೆಯಾಗಿ ಇರೋಣ ಅಂತ ಐಸಿಯು ನಲ್ಲಿ ಸೇರಿಸಿದ್ದೆವು' ಅನ್ನೋದು ಉತ್ತರ.

ಈ ಸುದ್ದಿ ಬರೆಯುತ್ತಿರುವಾಗ ರಜನಿ ಐಸಿಯು ನಿಂದ ಹೊರಗೆ ಬಂದಿದ್ದಾರೆ. ಆರೋಗ್ಯವೂ ಸುಧಾರಿಸಿದೆ. ಆದರೂ ಅವರನ್ನು ನೋಡಲು ಅಮೆರಿಕದಿಂದ ವೈದ್ಯರು ಬರುತ್ತಿದ್ದಾರಂತೆ. ಮತ್ತೆ ಅಭಿಮಾನಿಗಳಿಗೆ ಆತಂಕ.

ಅದೇನೇ ಇರಲಿ, ರಜನಿ 'ಮೆಗಾಸ್ಟಾರ್‌ಗಳ ಸೂಪರ್‌ಸ್ಟಾರ್' ಎನ್ನುವುದಂತೂ ಖಚಿತ. ರೋಬೋ ಚಿತ್ರದ ನಂತರ ಅವರ ಸ್ಟಾರ್ ವ್ಯಾಲ್ಯೂ ಇನ್ನಷ್ಟು ಮೇಲೇರಿದೆ. ಈಗ ಸಿದ್ಧವಾಗುತ್ತಿರುವ 'ರಾಣಾ' ಚಿತ್ರದ ಬಗ್ಗೆಯೂ ನೂರೆಂಟು ನಿರೀಕ್ಷೆಗಳಿವೆ. 61ರ ಹರೆಯದ ರಜನಿಗೆ ರಜನಿಯೇ ಸಾಟಿ.

■ ಬಿಂದು